# ಕರ್ನಾಟಕ ವಿಶ್ವವಿದ್ಯಾಲಯ
# KARNATAK UNIVERSITY

"A" Grade NAAC Accredited
University with Potential for Excellence

ಕಾಲೇಜು ಅಭಿವೃದ್ಧಿ ಮಂಡಳ/ಸಂಯೋಜನಾ ವಿಭಾಗ
COLLEGE DEVELOPMENT COUNCIL/AFFILIATION

ಪಾವಟೆ ನಗರ, ಧಾರವಾಡ-580003
Pavate Nagar, Dharwad-580 003 Karnataka-India


*Ref* No.KU/CDC/Affln./2023-24/769 Date: 20/05/2023

## ಪರಿಷ್ಕೃತ ಸುತ್ತೋಲೆ-3

ವಿಷಯ :- 2023-24ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ UUCMS ತಂತ್ರಾಂಶದ ಮುಖಾಂತರ ಸಂಯೋಜನಾ ಅರ್ಜಿ ಸಲ್ಲಿಸುವ ದಿನಾಂಕ ಮುಂದೂಡುವ ಹಾಗೂ ಅವಶ್ಯವಿದ್ದಲ್ಲಿ SBI Collect ಮೂಲಕ ಅಥವಾ ಡಿ.ಡಿ. ಮುಖಾಂತರ ಶುಲ್ಕವನ್ನು ಭರಿಸುವ ಕುರಿತು.

ಉಲ್ಲೇಖ:-1) ನಂ.ಕವಿವಿ/ಸಿಡಿಸಿ/ಸಂಯೋಜನೆ/2023-24/751 ದಿನಾಂಕ 22/04/2023, 04-05-2023. ಹಾಗೂ 17-05-2023.

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 16-05-2023.

ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜನೆಗೆ ಸಂಬಂಧಿಸಿದಂತೆ 2023-24ನೇ ಶೈಕ್ಷಣಿಕ ಸಾಲಿಗೆ UUCMS ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಹಾಗೂ ಶುಲ್ಕವನ್ನು ಭರಿಸಲು ಕೆಲವು ತಾಂತ್ರಿಕ ತೊಂದರೆಯಾಗುತ್ತಿರುವುದರಿಂದ ಸಂಯೋಜನಾ ಅರ್ಜಿ ಸಲ್ಲಿಸುವ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ.

| ಅ.ನಂ. | ವಿಷಯ | ದಿನಾಂಕ |
|---|---|---|
| 1) | UUCMS ತಂತ್ರಾಂಶದ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ದಂಡ ರಹಿತ) | 21/05/2023 |
| 2) | UUCMS ತಂತ್ರಾಂಶದ ಮುಖಾಂತರ ರೂ. 24,158/- ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 22/05/2023 |
| 3) | UUCMS ತಂತ್ರಾಂಶದಲ್ಲಿ ನಮೂದಿಸಿದ ಎಲ್ಲ ಮಾಹಿತಿಯನ್ನು ಡೌನ್‌ಲೋಡ್ ಮಾಡಿ 3 ಪ್ರತಿಗಳನ್ನು ಸಂಯೋಜನಾ ವಿಭಾಗಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 21/05/2023 |
| 4) | ಸ್ಥಾನಿಕ ವಿಚಾರಣಾ ಸಮಿತಿಯು ತಮ್ಮ ಮಹಾವಿದ್ಯಾಲಯಕ್ಕೆ ಭೇಟಿ ನೀಡುವ ಅವಧಿ(ರಜಾ ದಿನ ಸಹಿತ) | 22/05/2023 ರಿಂದ 26/05/2023 |

ಮುಂದುವರೆದು, UUCMS ತಂತ್ರಾಂಶದಲ್ಲಿ ತಾಂತ್ರಿಕ ದೋಷದಿಂದ ವಿಶ್ವವಿದ್ಯಾಲಯ ನಿಗದಿಪಡಿಸಿದ ಶುಲ್ಕದಲ್ಲಿ ವ್ಯತ್ಯಾಸವಾಗುವುದರಿಂದ ಸಂಬಂಧಪಟ್ಟ ಮಹಾವಿದ್ಯಾಲಯದವರು ಪರಿಷ್ಕೃತ Annexure 1, 2 & 3 ರಲ್ಲಿ ನಿಗದಿಪಡಿಸಿದ ಶುಲ್ಕವನ್ನು ಇದರೊಂದಿಗೆ ಲಗತ್ತಿಸಿದ ಮಾರ್ಗಸೂಚಿಗಳನ್ನು ಅನುಸರಿಸಿ, ಶುಲ್ಕವನ್ನು ಅನುಬಂಧ-A ಪ್ರಕಾರ ಪದವಿವಾರು ಲೆಕ್ಕ ಹಾಕಿ SBI Collect ಮೂಲಕ ಅಥವಾ D.D. in the name of Finance Officer, Karnatak University, Dharwad ತೆಗೆಯಿಸಿ, SBI Challan No./ಡಿ.ಡಿ.ಯ ಸಂಖ್ಯೆ, ದಿನಾಂಕ ಮತ್ತಿತರ ಮಾಹಿತಿಯನ್ನು UUCMS ತಂತ್ರಾಂಶದಲ್ಲಿನ offline payment ಎಂದು ಆಯ್ಕೆ ಮಾಡಿ SBI Challan/ಡಿ.ಡಿ. ಪ್ರತಿಯನ್ನು ಸ್ಕ್ಯಾನ್ ಮಾಡಿ upload ಮಾಡುವುದು. ನಂತರ ಅವಶ್ಯವಿದ್ದಲ್ಲಿ, ಮಹಾವಿದ್ಯಾಲಯವು ಇಚ್ಛಿಸಿದಲ್ಲಿ ದಾಖಲೆಗಳನ್ನು ಪುನರ್ ಪರಿಶೀಲಿಸಿದ ನಂತರ ತಕ್ಷಣವೇ UUCMS ತಂತ್ರಾಂಶದಲ್ಲಿನ Submit ಎಂಬುದರ ಮೂಲಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ನಂತರ ಸದರಿ Report ನ್ನು ಡೌನ್‌ಲೋಡ್ ಮಾಡಿ ಮೂರು ಪ್ರತಿಗಳನ್ನು SBI Challan/ಡಿ.ಡಿ. ಮತ್ತು ಅನುಬಂಧ-A ವನ್ನು ಸಂಯೋಜನಾ ವಿಭಾಗಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ಪ್ರತಿ ಮಹಾವಿದ್ಯಾಲಯವು ಹಲವಾರು ಸ್ನಾತಕ/ಸ್ನಾತಕೋತ್ತರ ಪದವಿಗಳನ್ನು ಒಟ್ಟುಗೂಡಿಸಿ ಕೇವಲ ಒಂದೇ ಅರ್ಜಿ ಶುಲ್ಕ ರೂ.2,417/-ಗಳನ್ನು ಮಾತ್ರ ಭರಿಸುವುದು ಮತ್ತು ರೂ.5,000/-ಗಳನ್ನು ವಿಶ್ವವಿದ್ಯಾಲಯ ಅಭಿವೃದ್ಧಿ ಶುಲ್ಕವೆಂದು ಪ್ರತಿ ಮಹಾವಿದ್ಯಾಲಯವು ಕಡ್ಡಾಯವಾಗಿ ಭರಿಸುವುದು. ಸಿ.ಡಿ.ಸಿ ವಿಭಾಗದ ಕಚೇರಿಯು ರವಿವಾರವೂ ಕಾರ್ಯನಿರ್ವಹಿಸುತ್ತದೆ.

ಮುಂದುವರೆದು, ಈಗಾಗಲೇ ಶುಲ್ಕವನ್ನು ಇತರೇ ವ್ಯವಸ್ಥೆಯ ಮೂಲಕ ಭರಿಸಿದ್ದಲ್ಲಿ ಸದರಿ ದಾಖಲೆಯನ್ನು ಈ ಮೇಲಿನ ಅನುಬಂಧದ ಪ್ರಕಾರ ಸಲ್ಲಿಸುವುದು.

ಕುಲಸಚಿವರು
20.5.23

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಅಧೀನ/ಸಂಯೋಜಿತ ಮಹಾವಿದ್ಯಾಲಯಗಳು

**ಪ್ರತಿ:** ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕ.ವಿ.ವಿ. ಧಾರವಾಡ. ಕ.ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಲು.


ದೂರವಾಣಿ: ೦೮೩೬-೨೨೧೫೩೫೩ ೦೮೩೬-೨೨೧೫೨೧೫ director.cdc@kud.ac.in Tel. No: 0836-2215353 0836-2215215